# ಗಾಂಧಿನಗರ ಪೋಸ್ಟ್



## ವರವ ಬೇಡಿದಳು 'ಶೈಲೂ'

ಗಣೇಶ್ ಹಾಗೂ ಭಾಮಾ ಜೋಡಿಯ 'ಶೈಲೂ' ಚಿತ್ರ ಡಿಸೆಂಬರ್ ಎರಡನೇ ವಾರದಲ್ಲಿ ತೆರೆಗೆ ಬರುವುದು ಹೆಚ್ಚೂಕಡಿಮೆ ಖಚಿತವಾಗಿದೆ. ಎಸ್.ನಾರಾಯಣ್ ಈ ಚಿತ್ರದ ನಿರ್ದೇಶಕರು. ಸಿನಿಮಾ ನೋಡಿರುವ ಸೆನ್ಸಾರ್ ಮಂಡಳಿ ಮುಕ್ತಕಂಠದ ಪ್ರಶಂಸೆಯೊಂದಿಗೆ 'ಯು' ಪ್ರಮಾಣಪತ್ರ ನೀಡಿದೆಯಂತೆ. ಈ ಪ್ರಶಂಸೆಯೊಂದಿಗೆ ದೈವಬಲವನ್ನೂ ಬಯಸಿ, ನಿರ್ಮಾಪಕ ಕೆ.ಮಂಜು, ಗಣೇಶ್ ಹಾಗೂ ಅವರ ಪತ್ನಿ ಶಿಲ್ಪಾ ಮತ್ತು ಗೆಳೆಯರು ಚಾಮುಂಡಿ ಬೆಟ್ಟಕ್ಕೆ ಟ್ರಿಪ್ ಹೋಗಿ 'ವರವ ಕೊಡೇ ಚಾಮುಂಡಿ' ಎಂದು ಕೋರಿಕೊಂಡಿದ್ದಾರೆ.

'ಶೈಲೂ' ತಮಿಳಿನ ಸೂಪರ್‌ಹಿಟ್ ಚಿತ್ರ 'ಮೈನಾ'ದ ಕನ್ನಡ ಅವತರಣಿಕೆ. 'ಮೈನಾ' ಎನ್ನುವ ಶೀರ್ಷಿಕೆ ನಾಗಶೇಖರ್ ಬಳಿ ಇರುವುದರಿಂದ ಮಂಜು ತಮ್ಮ ಚಿತ್ರವನ್ನು 'ಶೈಲೂ' ಎಂದು ಕರೆದಿದ್ದಾರೆ. ಮುನ್ನಾರ್‌ನ ಹಸಿರು ಪರಿಸರದಲ್ಲಿ 'ಶೈಲೂ' ರಂಗುರಂಗಾಗಿ ಮೂಡಿ ಬಂದಿದ್ದಾಳೆ ಎನ್ನುತ್ತಿದೆ ಚಿತ್ರತಂಡ. ಛಾಯಾಗ್ರಾಹಕ ಜಗದೀಶ್ ವಾಲಿ ಅವರ ಕೆಲಸದ ಬಗ್ಗೆಯೂ ಒಳ್ಳೆಯ ಮಾತುಗಳು ಕೇಳಿಬರುತ್ತಿವೆ.

ಹಾಂ, ಪುನೀತ್ ರಾಜಕುಮಾರ್ ಗೀತೆಯೊಂದನ್ನು ಹಾಡಿರುವುದು 'ಶೈಲೂ'ವಿನ ವಿಶೇಷಗಳಲ್ಲೊಂದು. ಜೆಸ್ಸಿ ಗಿಫ್ಟ್ ಈ ಚಿತ್ರದ ಸಂಗೀತ ನಿರ್ದೇಶಕ. ರಂಗಾಯಣ ರಘು ಅವರಿಗೆ ವಿಭಿನ್ನ ಪಾತ್ರವೊಂದು ಚಿತ್ರದಲ್ಲಿದೆಯಂತೆ.



## ಜ್ಞಾನೋದಯದ ನಿರೀಕ್ಷೆಯಲ್ಲಿ ಭಟ್ಟರು!

'ಪರಮಾತ್ಮ' ಚಿತ್ರದ ನಾಯಕ 'ಮಾರ್ಕ್ಸ್ ಕಾರ್ಡ್'ನಲ್ಲಿ ಸೊನ್ನೆ ಪಡೆದ ಚಂಬೇಶ್ವರ. ಆದರೆ, 'ಪರಮಾತ್ಮ' ಚಿತ್ರ ರ್‍ಯಾಂಕ್ ಪಡೆಯದಿದ್ದರೂ ಫಸ್ಟ್‌ಕ್ಲಾಸ್‌ನಲ್ಲೇ ಪಾಸಾಗಿದೆ. ನಾಯಕ ಪುನೀತ್ ಅವರೇನೋ 'ಅಣ್ಣಾ ಬಾಂಡ್'ನಲ್ಲಿ ದೇಹ ಹುರಿ ಮಾಡುತ್ತಿದ್ದಾರೆ. ನಿರ್ದೇಶಕ ಯೋಗರಾಜ ಭಟ್ ಏನು ಮಾಡುತ್ತಿದ್ದಾರೆ?

ಭಟ್ಟರ ಹೊಸ ಚಿತ್ರಕ್ಕಿನ್ನೂ ಮುಹೂರ್ತ ಕೂಡಿ ಬಂದಿಲ್ಲ. ಆದರೆ ಅವರು ಬಿಡುವಾಗಿಯೇನೂ ಇಲ್ಲ. ಮಗಳಿಗೆ ಕಥೆ ಹೇಳುವುದು ಇದ್ದೇ ಇದೆ. 'ಹಾಡು ಬರೀರಿ' ಎಂದು ಕಾಡುವ ನಿರ್ಮಾಪಕ–ನಿರ್ದೇಶಕರು ದಿನವೂ ಅವರಿಗೆ ಎಡತಾಕುತ್ತಲೇ ಇದ್ದಾರೆ. ಈ ನಡುವೆ 'ಅಣ್ಣಾ ಬಾಂಡ್'ಗೆ ಹಾಡು ಬರೆದಾಗಿದೆ. ಪುನೀತ್‌ಗೆ ಇನ್ನೊಂದು ಸಿನಿಮಾ ನಿರ್ದೇಶಿಸುವ ಸಾಧ್ಯತೆ ಇದ್ದೇ ಇದೆ. ಇತರ ನಾಯಕ–ನಿರ್ಮಾಪಕರ ಆಫರ್‌ಗಳೂ ಇವೆ. ಎಂದಿನಂತೆ ಕಥೆಯದ್ದೇ ಚಿಂತೆ. 'ಅಭಿಮಾನಿ ದೇವತೆಗಳು ಏನು ಮಾಡಿದರೆ ಮೆಚ್ಚುವರು' ಎನ್ನುವ ತಲಾಷಿನಲ್ಲಿ ಅವರಿದ್ದಾರೆ. ಯಾವ ಕ್ಷಣದಲ್ಲಾದರೂ ಜ್ಞಾನೋದಯ ಆಗಬಹುದಂತೆ!

## ಹರಿಕೃಷ್ಣರ ಹೊಸ ಟ್ರ್ಯಾಕ್

ಇತ್ತೀಚಿನ ಸುದ್ದಿಗಳ ಪ್ರಕಾರ ಸಂಗೀತ ನಿರ್ದೇಶಕ ಹರಿಕೃಷ್ಣ ಟ್ರ್ಯಾಕ್ ಬದಲಿಸಿದ್ದಾರೆ. ಸಿನಿಮಾ ನಿರ್ಮಾಣ ಅವರ ಹೊಸ ಟ್ರ್ಯಾಕ್. ರವಿವರ್ಮ ನಿರ್ದೇಶನದ ಅಜಯ್ ನಾಯಕರಾಗಿರುವ ಚಿತ್ರವನ್ನು ಹರಿಕೃಷ್ಣ ನಿರ್ಮಿಸಲಿದ್ದಾರೆ.

ಸಿನಿಮಾ ನಿರ್ಮಾಣ ಹರಿಕೃಷ್ಣರಿಗೆ ಹೊಸತೇನೂ ಅಲ್ಲ. ಈ ಮೊದಲು ದರ್ಶನ್ ನಾಯಕರಾಗಿದ್ದ 'ಬುಲ್ ಬುಲ್' ಚಿತ್ರಕ್ಕೆ ಗೆಳೆಯರೊಟ್ಟಿಗೆ ಪಾಲುದಾರರಾಗಿ ಬಂಡವಾಳ ಹೂಡಿದ್ದರು. ಆದರೆ, ಸ್ವತಂತ್ರ ನಿರ್ಮಾಪಕರಾಗಿ ಅವರು ಸಿನಿಮಾ ನಿರ್ಮಿಸುತ್ತಿರುವುದು ಇದೇ ಮೊದಲು. ಸದ್ಯದಲ್ಲೇ ಸಿನಿಮಾ ಮುಹೂರ್ತ ನಡೆಯಲಿದ್ದು, ಹರಿಕೃಷ್ಣ ಈಗಾಗಲೇ ಸ್ವರ ಸಂಯೋಜನೆಯಲ್ಲಿ ಮುಳುಗಿದ್ದಾರಂತೆ.

ಅಂದ ಹಾಗೆ, ಈ ಚಿತ್ರ ಸುತ್ತಿಬಳಸಿ ಹರಿಕೃಷ್ಣ ಅವರಲ್ಲಿಗೆ ಬಂದಿದೆ. ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ ನಿರ್ಮಾಪಕ ಎಸ್.ವಿ.ಬಾಬು ಅವರು ಈ ಚಿತ್ರವನ್ನು ನಿರ್ಮಿಸಬೇಕಿತ್ತು. ಆದರೆ, ತೆಲುಗಿನಲ್ಲಿ ಅವರ ಮಹತ್ವಾಕಾಂಕ್ಷೆಯ ಚಿತ್ರವೊಂದು ಮಕಾಡೆಯಾದುದರಿಂದ ಬಾಬು ಕನ್ನಡ ಚಿತ್ರದ ಬಗೆಗೂ ಆಸಕ್ತಿ ಕಳೆದುಕೊಂಡಿದ್ದಾರೆ ಎನ್ನಲಾಗಿದೆ. ತದನಂತರ 'ಅಶ್ವಿನಿ ಮೀಡಿಯ ವರ್ಕ್ಸ್' ಬಳಿಗೂ ರವಿವರ್ಮರ ಕನಸು ರವಾನೆಯಾಯಿತು. ಆದರೆ ಇತರ ಯೋಜನೆಗಳಲ್ಲಿ ತೊಡಗಿರುವ ಅವರು ತಕ್ಷಣವೇ ಸಿನಿಮಾ ನಿರ್ಮಿಸಲು ಸಾಧ್ಯವಾಗದ ಕಾರಣ ಕೊನೆಗೆ ಈ ಯೋಜನೆ ಹರಿಕೃಷ್ಣರ ಹೆಗಲೇರಿದೆ.



■ ರಘು